
# ಒದ್ದೆ ತುಟಿಯ ಹಾಡು

ಗೊತ್ತಿದೆ ನನಗೆ ಗೆಲುವು ಸುಲಭವಲ್ಲ
ಆದರೂ ನಿನ್ನಾಣೆ ನಾನು ಸೋಲುವುದಿಲ್ಲ

ಉರಿವ ಸೂರ್ಯನ ಅಟ್ಟಹಾಸಕ್ಕೆ ಸುಟ್ಟು ಕಪ್ಪಿಟ್ಟಿದ್ದೇನೆ
ಸಂಜೆಯಾದ ಮೇಲೆ ಕಂದೀಲು ಹಚ್ಚಿಕೊಳ್ಳಬೇಕು
ಗೊತ್ತಿದೆ ಇಲ್ಲಿ ಜಗವ ಬೆಳಗಲಾಗುವುದಿಲ್ಲ
ಆದರೂ ನಿನ್ನಾಣೆ ಪ್ರೀತಿ ಕತ್ತಲಲ್ಲಿರುವುದಿಲ್ಲ

ಭರತವೇರಿದ ಕಡಲಿನಾರ್ಭಟಕ್ಕೆ ತತ್ತರಿಸುತ್ತೇನೆ
ಅಳಿದುಳಿದ ಚಿಂದಿ ಹೊಲೆದು ಹಾಯಿಕಟ್ಟಬೇಕು
ಗೊತ್ತಿದೆ ಈಗ ಸೇರುವ ದಡ ಸಮೀಪವಿಲ್ಲ
ಆದರೂ ನಿನ್ನಾಣೆ ಶ್ರದ್ಧೆ ಮುಳುಗುವುದಿಲ್ಲ

ರಾತ್ರಿಯಿಡೀ ಸುರಿದ ಮಂಜಿಗೆ ಧರೆ ನಡುಗುತ್ತಿದೆ
ದರಕು ಹೊತ್ತಿಸಿ ಚಹಕ್ಕೆ ಎಸರಿಡಬೇಕು
ಗೊತ್ತಿದೆ ಶಿಶಿರಕ್ಕೆ ಚಿಗುರುವ ಕಸುವಿರುವುದಿಲ್ಲ
ಆದರೂ ನಿನ್ನಾಣೆ ವಸಂತ ದೂರವಿಲ್ಲ.


ವಾಗೀಶ ಹೆಗಡೆ

ತುಂಬುಗರ್ಭಿಣಿಯರು ಕೊಡ ಹೊತ್ತು ತೇಕುತ್ತಾರೆ
ಕುಲಾವಿಯ ಕಸೂತಿಗೆ ಸೂಜಿ ಪೋಣಿಸಬೇಕು
ಗೊತ್ತಿದೆ ರಂಗೋಲಿಗಳು ನಾಳೆಗುಳಿವುದಿಲ್ಲ
ಆದರೂ ನಿನ್ನಾಣೆ ಅಂಗಳ ಬರಿದಾಗಿಸುವುದಿಲ್ಲ

ಹಾಡುತ್ತಿದ್ದ ಮಕ್ಕಳ ತುದಿಗೋಪರದಿ ನೇಣಿಕ್ಕಿದ್ದಾರೆ
ಪಿಯಾನಿನ ದೂಳೊರೆಸಿ ಪ್ರಾರ್ಥನೆಗೆ ತಿದಿಯೊತ್ತಬೇಕು
ಗೊತ್ತಿದೆ ಈ ರಕ್ತದಾಹದ ಯುದ್ಧ ನಿಲ್ಲಿಸಲಾಗುವುದಿಲ್ಲ
ಆದರೂ ನಿನ್ನಾಣೆ ಮುದ್ದಿಸುವ ತುಟಿಯೊದ್ದೆ ಆರುವುದಿಲ್ಲ

● ಪ್ರಜ್ಞಾ ಮತ್ತೀಹಳ್ಳಿ